ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸುರಪುರ
ಸಾಃ ಸುರಪುರ

**ಸಿ ಸಿ ನಂ. 500/2025**

ಪಿರ್ಯಾದಿ ಃ ಸುರಪುರ ಪೋಲಿಸ್ ಠಾಣೆ, ಸುರಪುರ

ವಿರುದ್ಧ

ಆರೋಪಿತರು ಃ ಮಹಾದೇವಪ್ಪ ಮತ್ತು ಇನ್ನೊಬ್ಬ

<u>ದಂಡ ಪ್ರಕಿಯಾ ಸಂಹಿತೆ ಕಲಂ 240 (1) ರಡಿಯಲ್ಲಿ ದೋಷಾರೋಪಣೆ</u>

ನಾನು ಬಸವರಾಜ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸುರಪುರ ಈ ಮೂಲಕ ನಿಮ್ಮ ಮೇಲೆ ರಚಿಸುವ ದೋಷಾರೋಪಣೆ ಏನೆಂದರೆ,

01. ಮಹಾದೇವಪ್ಪ ತಂದೆ ಭೀಮಪ್ಪ ಕಟ್ಟಿಮನಿ
ವಯಸ್ಸುಃ 50 ವರ್ಷ ಉಃ ಅಡುಗೆ ಸಹಾಯಕ ಸಾಃ ಟಿ ಬೊಮ್ಮನಹಳ್ಳಿ

02. ಗೋವಿಂದಪ್ಪಗೌಡ ತಂದೆ ದೇಸಾಯಿಗೌಡ ಮಾಲಿ ಪಾಟೀಲ
ವಯಸ್ಸುಃ 44 ವರ್ಷ ಉಃ ಅಡುಗೆ ಸಹಾಯಕ
ಇಬ್ಬರೂ ಸಾಃ ವಾಗನಗೇರಾ ಹಾವಃ ಹುದ್ದಾರ ಓಣಿ ತಾಃ ಸುರಪುರ

ಮೊದಲನೆದಾಗಿ ದಿನಾಂಕ 08.11.2024 ರಂದು ಬೆಳಿಗ್ಗೆ 11.30 ಗಂಟೆ ಸುಮಾರಿಗೆ ಸುರಪುರ ಪೋಲಿಸ ಠಾಣಾ ಹದ್ದಿಯ ಸುರಪುರ ನಗರದ ನ್ಯಾಯಾಲಯದ ಮುಂದುಗಡೆ ಮಲ್ಲಿಬಾವಿ ಗ್ರಾಮಕ್ಕೆ ಹೋಗುವ ರಸ್ತೆ ಮೇಲೆ ಚಾಸಾ1, 4 ಮತ್ತು 5 ರವರು ಹಾಸ್ಟೆಲನಲ್ಲಿ ಅಡುಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದು ಮೊಬೈಲ್‌ನಲ್ಲಿ ಅವಾಚ್ಯವಾಗಿ ಆಡಿಯೋ ವಿಚಾರವಾಗಿ 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ1 ಮತ್ತು 4 ರವರಿಗೆ ಕೈಯಿಂದ ಕಪಾಳಕ್ಕೆ ಹೊಡೆದು, ಚಾಸಾ4 ರವರಿಗೆ ಕಾಲಿನಿಂದ ಹೊಟ್ಟೆಗೆ ಒದ್ದು ಸಾಧಾರಣ ಸ್ವರೂಪ ಗಾಯಪಡಿಸಿದ್ದು, ಆ ಮೇರೆಗೆ ಭಾ.ನಾ.ಸು.ಸಂ.ಕಲಂ.115(2) ಸಹ ಕಲಂ.3(5) ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಎರಡನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಕೇಸಿನ 1 ನೇ ಆರೋಪಿತನಾದ ನೀನು ಚಾಸಾ1 ರವರ ಕೈ ಹಿಡಿದು ಸೀರೆ ಹಿಡಿದು ಎಳೆದಾಡಿ ಮಾನಭಂಗ ಪಡಿಸಲು ಪ್ರಯತ್ನಿಸಿದ್ದು, ಆ ಮೇರೆಗೆ ಭಾ.ನಾ.ಸು.ಕಲಂ 74 ಸಹ ಕಲಂ.3(5) ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಮೂರನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಕೇಸಿನ 2 ನೇ ಆರೋಪಿತನಾದ ನೀನು ಚಾಸಾ4 ರವರಿಗೆ ಚಪ್ಪಲಿಯಿಂದ ಹೊಡೆದು ಅವಮಾನ ಮಾಡಿದ್ದು, ಆ ಮೇರೆಗೆ ಭಾ.ನಾ.ಸು.ಕಲಂ 133 ಸಹ

ಕಲಂ.3(5) ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ನಾಲ್ಕನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ1 ಮತ್ತು 4 ರವರಿಗೆ ಉದ್ರೇಖಿಸುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೇರೆಗೆ ಭಾ.ನಾ.ಸು.ಕಲಂ 352 ಸಹ ಕಲಂ.3(5) ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಕೊನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಕೇಸಿನ ಆರೋಪಿತರಾದ ನೀವು ಚಾಸಾ1 ಮತ್ತು 4 ರವರಿಗೆ ಜೀವದ ಬೆದರಿಕೆ ಹಾಕಿದ್ದು, ಆ ಮೇರೆಗೆ ಭಾ.ನಾ.ಸು.ಸಂ.ಕಲಂ.351(2) ಸಹ ಕಲಂ.3(5) ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರ.ದಾ.ನ್ಯಾದಂಡಾಧಿಕಾರಿಗಳು
ಸುರಪುರ

**<u>ಆರೋಪಿತರ ಉತ್ತರ</u>**

ಪ್ರಶ್ನೆ 1) ಈಗ ನಿಮಗೆ ಓದಿ ಹೇಳಿದ ದೋಷಾರೋಪಣೆಯ/ಆಪಾದನೆಯ ಸಾರಾಂಶ ತಿಳಿಯಿತೇ?

ಉತ್ತರಃ

ಪ್ರಶ್ನೆ 2) ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?

ಉತ್ತರಃ

(ಈ ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣೀಕರಿಸುತ್ತೇನೆ)

(ಬಸವರಾಜ)
ಸಿ.ನ್ಯಾ. ಮತ್ತು ಪ್ರ.ದ.ನ್ಯಾದಂ.ಗಳು.
ಸುರಪೂರ.

ಸ್ಥಳಃ ಸುರಪೂರ
ದಿನಾಂಕಃ 10.12.2025

ಆರೋಪಿತರ ಸಹಿ